# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಸಿಡಿ/1253/2021
ಮಂಡನಾಧಿಕಾರಿಗಳ ಶಾಖೆ : ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 09/02/2022.

14

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: 1) ಶ್ರೀ.ಸಿ.ವಿ.ಶ್ರೀನಿವಾಸ್, ಪ್ರಥಮ ದರ್ಜೆ ಸಹಾಯಕ, 2) ಶ್ರೀಮತಿ ಎಂ.ಜಿ.ಶಾಂತಮ್ಮ, ಬೆರಳಚ್ಚುಗಾರ್ತಿ, ಕರ್ನಾಟಕ ಮಹಿರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಸಂಪಂಗಿರಾಮನಗರ, ಬೆಂಗಳೂರು,** ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬೆಂಗಳೂರು ನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ 1) **ಶ್ರೀ.ಸಿ.ವಿ.ಶ್ರೀನಿವಾಸ್, ಪ್ರಥಮ ದರ್ಜೆ ಸಹಾಯಕ, 2) ಶ್ರೀಮತಿ ಎಂ.ಜಿ.ಶಾಂತಮ್ಮ, ಬೆರಳಚ್ಚುಗಾರ್ತಿ, ಕರ್ನಾಟಕ ಮಹಿರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಸಂಪಂಗಿರಾಮನಗರ, ಬೆಂಗಳೂರು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ.ಪಿ.ಹೆಚ್.ರಾಮು, ಬಿನ್ ಹನುಮಂತರಾಯಪ್ಪ, ನಂ: 69, 16ನೇ ಕ್ರಾಸ್, 1ನೇ ಮೈನ್, ಬಿ.ಕೆ.ನಗರ, ಯಶವಂತಪುರ, ಬೆಂಗಳೂರು-52** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರಾದ **ಶ್ರೀ.ಪಿ.ಹೆಚ್.ರಾಮು, ಬಿನ್ ಹನುಮಂತರಾಯಪ್ಪ, ನಂ: 69, 16ನೇ ಕ್ರಾಸ್, 1ನೇ ಮೈನ್, ಬಿ.ಕೆ.ನಗರ, ಯಶವಂತಪುರ, ಬೆಂಗಳೂರು–52,** ಇವರು ಪರಿಶಿಷ್ಟ ಜನಾಂಗಕ್ಕೆ ಸೇರಿದ್ದು, 2015–16ನೇ ಸಾಲಿಗೆ **ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ, ಸ್ವಯಂ ಉದ್ಯೋಗ ಯೋಜನೆಯಡಿ ನೀಡಲಾಗುವ ಸಬ್ಸಿಡಿ ಸಹಿತ ಮೊತ್ತ 1 ಲಕ್ಷ ರೂ.ಗಳ ಹಣಕ್ಕೆ ದಿನಾಂಕ: 15/5/2015 ರಂದು ಅರ್ಜಿ ಸಲ್ಲಿಸಿದ್ದು, ಈ ಸಬ್ಸಿಡಿ ಹಣ ಪಡೆಯಲು ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳನ್ನು ನಿಗಮಕ್ಕೆ ಸಲ್ಲಿಸಿದ್ದರೂ ಸಹ, ಶ್ರೀ ರಾಜಶೇಖರ್, (ನಿವೃತ್ತ) ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಹೊರಗುತ್ತಿಗೆ ನೌಕರ ಮತ್ತು ಎದುರುದಾರರುಗಳಾದ** 1ನೇ ಎದುರುದಾರರಾದ **ಶ್ರೀ.ಸಿ.ವಿ.ಶ್ರೀನಿವಾಸ್, ಬಿನ್ ವೆಂಕಟಸ್ವಾಮಿ, ಪ್ರಥಮ ದರ್ಜೆ ಸಹಾಯಕ, 2ನೇ ಎದುರುದಾರರಾದ ಶ್ರೀಮತಿ ಎಂ.ಜಿ.ಶಾಂತಮ್ಮ, ಕೋಂ ಲೇಟ್ ಪರಮೇಶ್ವರಪ್ಪ, ಬೆರಳಚ್ಚುಗಾರ್ತಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಸಂಪಂಗಿರಾಮನಗರ, ಬೆಂಗಳೂರು,** ಇವರುಗಳು ದೂರುದಾರರಿಂದ ಸಬ್ಸಿಡಿ ಹಣದ ಮೊತ್ತ ರೂ.35,000/– ಗಳಿಗೆ, 7000/– ರೂ.ಗಳು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ.

3. ದೂರುದಾರರು ಅಷ್ಟು ಹಣ ತಮ್ಮ ಹತ್ತಿರ ಇಲ್ಲವೆಂದಾಗ 1ನೇ ಮತ್ತು 2ನೇ ಎದುರುದಾರರುಗಳು ಮತ್ತು ಶ್ರೀ **ರಾಜಶೇಖರ್, (ನಿವೃತ್ತ) ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಹೊರಗುತ್ತಿಗೆ ನೌಕರ,** ಒಟ್ಟಾಗಿ 5000/– ರೂ. ಲಂಚದ ಹಣ ನೀಡಲು ದೂರುದಾರರಿಗೆ ಒತ್ತಾಯಿಸಿರುತ್ತಾರೆ. ಸದರಿ ಲಂಚದ ಹಣಕ್ಕೆ ಒತ್ತಾಯಿಸಿದ ಎದುರುದಾರರ ಸಂಭಾಷಣೆಯನ್ನು ದೂರುದಾರರು, ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

4. ದೂರುದಾರರಿಗೆ ಲಂಚ ಹಣ ನೀಡಲು ಮನಸ್ಸಿಲ್ಲವಾದ್ದರಿಂದ ದಿ:04/04/2016ರಂದು ಪೊಲೀಸ್ ಉಪಾಧೀಕ್ಷಕರು, ಎ.ಸಿ.ಬಿ., ಬೆಂಗಳೂರು ನಗರ ಪೊಲೀಸ್ ಠಾಣೆ, ಬೆಂಗಳೂರು ಇವರಿಗೆ ದೂರನ್ನು ಮತ್ತು ಲಂಚದ ಬೇಡಿಕೆ ಇದ್ದ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಸದರಿ ಗುನ್ನಾ ನಂ. 01/2016 ರಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7 ರ ಅನ್ವಯ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ. ಅದೇ ದಿನ ಅಂದರೆ 4/4/2016 ರಂದು ತನಿಖಾಧಿಕಾರಿಯು ಪಂಚರುಗಳಾದ 1) ರಘುನಂದನ ಪಂಚ–1, ಮತ್ತು 2) ಎನ್. ರಮೇಶ್ ನಾಯಕ್ ಪಂಚ–2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ದೂರಿನ ವಿಚಾರವನ್ನು ತಿಳಿಸಿಕೊಟ್ಟಿರುತ್ತಾರೆ. ದೂರುದಾರರು 1ನೇ ಮತ್ತು 2ನೇ ಎದುರುದಾರರುಗಳಿಗೆ ಹಾಗೂ **ಶ್ರೀ ರಾಜಶೇಖರ್, (ನಿವೃತ್ತ) ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಹೊರಗುತ್ತಿಗೆ ನೌಕರ** ಇವರಿಗೆ ಕೊಡಲು ತಂದಿದ್ದ 5000/– ರೂ.ಗಳನ್ನು (1000/– ಮುಖ ಬೆಲೆಯ 5 ನೋಟುಗಳು) ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯ ಮೇರೆಗೆ ಪಂಚ–1 ರಘುನಂದನ ಹಣವನ್ನು ಎಣಿಸಿರುತ್ತಾರೆ. ಪಂಚ–2 ಎನ್. ರಮೇಶ್ ನಾಯಕ್ ಇವರು ಹಣದ ಮೌಲ್ಯ ಮತ್ತು ನಂಬರುಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆಯ ಮೇರೆಗೆ ಪಂಚ–2 ರವರು ಪೊಲೀಸ್

ಸಿಬ್ಬಂದಿಯಿಂದ ಪಿನಾಪ್ತಿಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ಎಣಿಸಿ ದೂರುದಾರರು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ.

5. ನಂತರ ತನಿಖಾಧಿಕಾರಿಯು ಪಂಚ–1 ಇವರಿಗೆ ದೂರುದಾರರ ಜೊತೆಯಲ್ಲಿದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ನಂತರ ದೂರುದಾರರು ಎದುರುದಾರರಲ್ಲಿ ಹೋದಾಗ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದರೆ, ತಕ್ಷಣ ದೂರುದಾರರು ತನ್ನ ಕೈಯಿಂದ ತಮ್ಮ ತಲೆಯ ಸವರುವುದರ ಮೂಲಕ ಸೂಚನೆಯನ್ನು ನೀಡಬೇಕೆಂದು ಸೂಚಿಸಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂದವಾಗಿ ತನಿಖಾಧಿಕಾರಿ ದಿ: 4/4/2016 ರಂದು ಬೆಳಿಗ್ಗೆ : 11.15 ರಿಂದ 12.30 ರವರೆಗೆ ಪ್ರಾಯೋಗಿಕ ಪಂಚನಾಮೆಯನ್ನು ಬರೆದಿರುತ್ತಾರೆ.

6. ಅದೇ ದಿನ ದಿ: 4/4/2016 ರಂದು ತನಿಖಾಧಿಕಾರಿಯು ದೂರುದಾರರನ್ನು ಮತ್ತು ಸಿಬ್ಬಂದಿಯನ್ನು ಕರೆದುಕೊಂಡು, ಎದುರುದಾರರ ಕಚೇರಿಯ ಹತ್ತಿರ ಸುಮಾರು 1.00 ಗಂಟೆಗೆ ಬಂದಿರುತ್ತಾರೆ. ನಂತರ ದೂರುದಾರರು ಪಂಚ–1 ರಘುನಂದನ ರವರೊಂದಿಗೆ ಎದುರುದಾರರ ಕಚೇರಿಗೆ ಹೋಗಿ, 1 ಮತ್ತು 2ನೇ ಎದುರುದಾರರನ್ನು ಹಾಗೂ **ಶ್ರೀ ರಾಜಶೇಖರ್, (ನಿವೃತ್ತ) ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಹೊರಗುತ್ತಿಗೆ ನೌಕರ** ಇವರನ್ನು ಭೇಟಿ ಮಾಡಿ, ತನ್ನ ಚೆಕ್ ಬಗ್ಗೆ ವಿಚಾರಿಸಿದಾಗ, ಶ್ರೀ ರಾಜಶೇಖರ ರವರು ದೂರುದಾರರನ್ನು ಕಚೇರಿಯಿಂದ ಹೊರಗೆ ಪ್ಯಾಸೇಜ್ ಬಳಿ ಕರೆದುಕೊಂಡು ಹೋಗಿ, 5000/– ರೂ ಲಂಚ ತಂದಿದ್ದೀರಾ ಎಂದು ಒತ್ತಾಯಿಸಿದ ಮೇರೆಗೆ ದೂರುದಾರರು ತನ್ನ ಬಳಿ ಇದ್ದ ಪಿನಾಪ್ತಿಲಿನ್ ಲೇಪಿತ ಹಣವನ್ನು ಕೊಟ್ಟಾಗ, ರಾಜಶೇಖರ್ ರವರು ಸದರಿ ಹಣವನ್ನು ಬಲಗೈಯಿಂದ ಪಡೆದು ಎಣಿಸಿ ತಮ್ಮ ಶರ್ಟಿನ ಎಡಜೇಬಿನಲ್ಲಿ ಇರಿಸಿಕೊಂಡು, ಚೆಕ್ಕನ್ನು ಬ್ಯಾಂಕ್‌ಗೆ ಶುಕ್ರವಾರ ಕಳುಹಿಸುವುದಾಗಿ ತಿಳಿಸಿರುತ್ತಾರೆ. ತಕ್ಷಣ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ಆಗ ಸಮಯ ಮ: 1.10 ಆಗಿರುತ್ತದೆ. ಸೂಚನೆಯನ್ನು ಅನುಸರಿಸಿ ತನಿಖಾಧಿಕಾರಿಯು ದೂರುದಾರರ ಹತ್ತಿರ ಬಂದು ಮಾಹಿತಿಯನ್ನು ಪಡೆದು, ನಂತರ ದೂರುದಾರರು ಲಂಚದ ಹಣ ಸ್ವೀಕರಿಸಿದ ವ್ಯಕ್ತಿ ಶ್ರೀ ರಾಜಶೇಖರ್ ಇವರನ್ನು ತನಿಖಾಧಿಕಾರಿಗೆ ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ಶ್ರೀ ರಾಜಶೇಖರ್ ಇವರಿಗೆ ತನ್ನನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆ ಪ್ರಾರಂಭಿಸಿ, ತನಿಖಾಧಿಕಾರಿ ನೀಡಿದ ಸೂಚನೆ ಮೇರೆಗೆ, ಸಿಬ್ಬಂದಿಯವರು, ಶ್ರೀ ರಾಜಶೇಖರ್ ರವರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿ ಲಂಚದ ಹಣದ ಬಗ್ಗೆ ವಿಚಾರಿಸಿದಾಗ, ಶ್ರೀ ರಾಜಶೇಖರ್ ರವರು ಲಂಚದ ಹಣವನ್ನು ತನ್ನ ಶರ್ಟಿನ ಎಡ ಜೇಬಿನಲ್ಲಿ ಇಟ್ಟಿರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚ–2 ಸದರಿ ಹಣವನ್ನು ಹೊರ ತೆಗೆದು ಎಣಿಸಿ ಅದರ ಮೌಲ್ಯ ಮತ್ತು

ನಂಬರುಗಳನ್ನು ವಹಿಸುವಿಕೆ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿಕೊಂಡು, ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಶ್ರೀ ರಾಜಶೇಖರ್ ರವರ ಧರಿಸಿದ ಶರ್ಟನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯು ದೂರುದಾರರಿಂದ ಲಂಚದ ಹಣವನ್ನು ಪಡೆದ ಬಗ್ಗೆ, ರಾಜಶೇಖರವರನ್ನು ಸಮಜಾಯಿಷಿ ಕೊಡುವಂತೆ ಕೇಳಿದಾಗ, ಅವರು ತನ್ನ ಸಮಜಾಯಿಷಿಕೆಯಲ್ಲಿ "ರಾಮು ಇವರು ಯಾವುದೇ ವಿಚಾರವನ್ನು ನೀಡದೆ ಬಲವಂತವಾಗಿ ಹಣವನ್ನು ನೀಡಿರುತ್ತಾರೆ. ಇದರ ಸಂಬಂಧ ರಾಮುರವರನ್ನು ಹಣ ಕೇಳಿರುವುದಿಲ್ಲ. ಇವರಿಂದ ಡಿಮ್ಯಾಂಡ್ ಮಾಡಿರುವುದಿಲ್ಲ ಇತ್ಯಾದಿ ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ಪಂಚ–1 ರವರು ಅಲ್ಲಗಳೆದಿರುತ್ತಾರೆ. ನಂತರ ತನಿಖಾಧಿಕಾರಿ 1ನೇ ಎದುರುದಾರ ಶ್ರೀನಿವಾಸ ರವರನ್ನು ವಿಚಾರಿಸಿ, ಸಮಜಾಯಿಷಿ ಕೇಳಿದಾಗ, "ಶ್ರೀ ರಾಮು, ಇವರು ಸ್ವಯಂ ಉದ್ಯೋಗ ಯೋಜನೆಯಡಿ ಒಂದು–ಲಕ್ಷ ರೂ. ಆರ್ಥಿಕ ನೆರವನ್ನು ಕೋರಿರುತ್ತಾರೆ. ಸದರಿಯವರಿಗೆ ರೂ 35000/– ರೂಗಳ ಸಹಾಯ ಧನ ಚೆಕ್‌ಅನ್ನು ಬರೆದು ಬ್ಯಾಂಕಿಗೆ ಕಳುಹಿಸಬೇಕಾಗುತ್ತದೆ. ಈ ಸಂಬಂಧ ನಾನು ಲಂಚ ಕೇಳಿರುವುದಿಲ್ಲ ಇತ್ಯಾದಿ ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ಪಂಚ–1 ರವರು ಅಲ್ಲಗಳೆದಿರುತ್ತಾರೆ. ಸದರಿ ತನಿಖಾಧಿಕಾರಿ 2ನೇ ಎದುರುದಾರರನ್ನು ವಿಚಾರಿಸಿ ಸಮಜಾಯಿಷಿ ಕೇಳಿದಾಗ, ಅವರು "ರಾಮು ಬೆಂಗಳೂರು ರವರು ನನ್ನ ಬಗ್ಗೆ ಹಣದ ಆರೋಪವನ್ನು ಹೊರಿಸಿರುತ್ತಾರೆ. ಈ ಕಚೇರಿಯಲ್ಲಿ ತಾನು ಬೆರಳಚ್ಚುಗಾರಳಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಮು ರವರ ಕಡತ ನನ್ನ ಬಳಿ ಬಂದ ತಕ್ಷಣ ಅದನ್ನು ಬೆರಳಚ್ಚು ಮಾಡಿ, ಲೆಕ್ಕದ ಶಾಖೆಗೆ ನೀಡಿರುತ್ತೇನೆ ಇತ್ಯಾದಿ ನುಡಿದಿರುತ್ತಾರೆ. ನಂತರ, ತನಿಖಾಧಿಕಾರಿಯು 1ನೇ ಎದುರುದಾರರಾದ ಶ್ರೀನಿವಾಸ ರವರನ್ನು ಸಮಜಾಯಿಷಿಕೆ ನೀಡುವಂತೆ ಕೇಳಿದಾಗ, ಅವರು ತಮ್ಮ ವರದಿಯಲ್ಲಿ ಶ್ರೀ ರಾಮು ಇವರು ಸ್ವಯಂ ಉದ್ಯೋಗ ಯೋಜನೆಯಡಿ 1 ಲಕ್ಷ ಆರ್ಥಿಕ ನೆರವನ್ನು ಕೋರಿರುತ್ತಾರೆ. ಸದರಿಯವರಿಗೆ 35000/– ರೂ.ಗಳನ್ನು ಸಹಾಯಧನ ಚೆಕ್ಕನ್ನು ಬರೆದು ಬ್ಯಾಂಕಿಗೆ ಕಳುಹಿಸಬೇಕಾಗಿರುತ್ತದೆ. ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಹಣ ಲಂಚವಾಗಿ ಕೇಳಿರುವುದಿಲ್ಲ ಇತ್ಯಾದಿ ಈ ಮೂಲಕ ಕೋರುವುದಾಗಿ ತಿಳಿಸಿರುತ್ತಾರೆ. ಮೇಲ್ಕಂಡವರ ಸಮಜಾಯಿಷಿಯನ್ನು ದೂರುದಾರರು ಮತ್ತು ಪಂಚ–1 ರವರು ಅಲ್ಲಗಳೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಘಟನಾವಳಿಗಳನ್ನು ಚಿತ್ರೀಕರಿಸಿ, ಅಂದೇ ಎದುರುದಾರರನ್ನು ಹಾಗೂ ರಾಜಶೇಖರ ಇವರುಗಳನ್ನು ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ಟ್ರ್ಯಾಪ್ ಪಂಚನಾಮೆಯನ್ನು ದಿ: 4/4/2016ರ ಮ: 1.30 ರಿಂದ 5.30 ರವರೆಗೆ ಬರೆದಿರುತ್ತಾರೆ.

7. ತನಿಖಾಧಿಕಾರಿಯವರು, ಸಿ.ಡಿ.ಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ 1 ಮತ್ತು 2ನೇ ಎದುರುದಾರರುಗಳ ಧ್ವನಿಗೆ ಹಾಗೂ ರಾಜಶೇಖರ (ಹೊರಗುತ್ತಿಗೆ ನೌಕರ) ಇವರ ಧ್ವನಿಗೆ ಮತ್ತು 1 ಮತ್ತು 2ನೇ ಎದುರುದಾರರುಗಳ ಹಾಗೂ ರಾಜಶೇಖರ ಇವರ ಮಾದರಿ ಧ್ವನಿಗೆ ತಾಳೆ ಇರುವುದಾಗಿ ಧ್ವನಿ ವಿಶ್ಲೇಷಣಾ ವರದಿಯಿಂದ ದೃಢಪಟ್ಟಿದೆ ಹಾಗೂ ಜೆ.ಜಿ.ಪದ್ಮನಾಭ ಜಿಲ್ಲಾ

ವ್ಯವಸ್ಥಾಪಕರು, **ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಸಂಪಂಗಿರಾಮನಗರ, ಬೆಂಗಳೂರು** ಇವರು ದೂರುದಾರರ ಮೊಬೈಲ್ ನಲ್ಲಿ ದಾಖಲಾಗಿದ್ದ, 1 ಮತ್ತು 2ನೇ ಎದುರುದಾರರ ಹಾಗೂ ಶ್ರೀ ರಾಜಶೇಖರ್ (ಹೊರಗುತ್ತಿಗೆ ನೌಕರ) ರವರ ಸಂಭಾಷಣೆಯನ್ನು ಕೇಳಿ, ಸದರಿ ಧ್ವನಿಗಳು 1 ಮತ್ತು 2ನೇ ಎದುರುದಾರರ ಹಾಗೂ ಶ್ರೀ ರಾಜಶೇಖರ್ (ಹೊರಗುತ್ತಿಗೆ ನೌಕರ) ರವರುಗಳ ಧ್ವನಿ ಎಂದು ಗುರುತಿಸಿರುತ್ತಾರೆ.

8. ರಾಸಾಯನಿಕ ತಜ್ಞರು ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಪಿನಾಪ್ತಿಲಿನ್ ಅಂಶ ಇರುವುದು ದೃಢಪಟ್ಟಿದೆ.

9. ದಿ: 19/07/2021 ರಂದು 1 ಮತ್ತು 2ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಕೇಳಲಾಗಿತ್ತು. 1ನೇ ಎದುರುದಾರರು ತನ್ನ ವಿವರಣೆಯನ್ನು ದಿ: 9/8/2021 ರಂದು ಸಲ್ಲಿಸಿದ್ದು, ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, 1ನೇ ಎದುರುದಾರರು ತನ್ನ ಮೇಲಿರುವ ಆರೋಪವು ಸಂಪೂರ್ಣ ನಿರಾಧಾರವಾಗಿರುತ್ತವೆ ಎಂದು ಸಾರಸಗಟಾಗಿ ನಿರಾಕರಿಸಿರುತ್ತಾರೆ. ತನಗೆ ಆನೇಕಲ್ ತಾಲ್ಲೂಕಿನ ಕೆಲಸವನ್ನು ಹೆಚ್ಚುವರಿಯಾಗಿ ಕೊಟ್ಟಿರುತ್ತಾರೆ ಹಾಗೂ ದೂರುದಾರರು ಸ್ವಯಂ ಉದ್ಯೋಗ ಯೋಜನೆಯಲ್ಲಿ ಬಟ್ಟೆ ವ್ಯಾಪಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿ: 19/3/2016 ರಂದು ದೂರುದಾರರಿಗೆ 35,000/– ರೂ.ಗಳ ಸಬ್ಸಿಡಿ ಹಣ ಬಿಡುಗಡೆ ಮಾಡಲು ಸಿಂಡಿಕೇಟ್ ಬ್ಯಾಂಕ್ ಯಶವಂತಪುರ ಶಾಖೆ ರವರು ಕ್ಲೈಮ್ ನ್ನು ಕಚೇರಿಗೆ ಸಲ್ಲಿಸಿರುತ್ತಾರೆ. ಕ್ಲೈಮ್‌ನ್ನು ಕಡತದಲ್ಲಿ ಮಂಡಿಸುವಂತೆ 2ನೇ ಎದುರುದಾರರು ಇವರಿಗೆ ಜಿಲ್ಲಾ ವ್ಯವಸ್ಥಾಪಕರು ತಿಳಿಸಿರುತ್ತಾರೆ. ದಿ: 22/3/2016 ರಂದು ಸಹಾಯಧನವನ್ನು ಬಿಡುಗಡೆಗೆ ಕಡತ ಮಂಡಿಸಿರುತ್ತಾರೆ ಎಂದು 2ನೇ ಎದುರುದಾರರು ತಿಳಿಸಿರುತ್ತಾರೆ. ಆದರೆ ತನಗೆ ಕಚೇರಿ ಕೆಲಸದ ಜೊತೆಗೆ ಆನೇಕಲ್ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಪ್ರಭಾರ ಕಾರ್ಯ ಇರುತ್ತದೆ. ಕೆಲಸದ ಒತ್ತಡದಿಂದ ದಿ: 1/4/2016 ರಂದು ಚೆಕ್ಕನ್ನು ಸಿದ್ದಪಡಿಸಿದ್ದು, ನಮ್ಮ ಜಿಲ್ಲಾ ವ್ಯವಸ್ಥಾಪಕರಿಗೆ ತಿಳಿಸಿರುತ್ತೇನೆ. ದಿ: 4/4/2016 ರಂದು ದೂರುದಾರರು ಇವರ ಕಚೇರಿಗೆ ಬಂದು ಚೆಕ್ಕ್ ಸಿದ್ದವಾಗಿದೆಂದು ತನನ್ನು ಕೇಳಿರುತ್ತಾರೆ. ನಮ್ಮ ಜಿಲ್ಲಾ ವ್ಯವಸ್ಥಾಪಕರು ಬರುತ್ತಾರೆ. ಚೆಕ್ಕನ್ನು ಸಹಿ ಮಾಡಿ ಬ್ಯಾಂಕಿಗೆ ಕಳುಹಿಸುತ್ತೇವೆಂದು ಅವರಿಗೆ ತಿಳಿಸಿರುತ್ತೇವೆ. ನಂತರ ಜಿಲ್ಲಾ ವ್ಯವಸ್ಥಾಪಕರು ದೂರುದಾರರ ಚೆಕ್ಕಿಗೆ ಹಾಗೂ ಇತರೆ ಚೆಕ್ಕುಗಳಿಗೆ ಸಹಿ ಮಾಡಿರುತ್ತಾರೆ. ಚೆಕ್ಕ್ ಗೆ ಸಹಿಯಾದ ನಂತರ ನೇರವಾಗಿ ಬ್ಯಾಂಕಿಗೆ ಕಳುಹಿಸುತ್ತೇವೆ ವಿನಹ ಫಲಾನುಭವಿಗೆ ನೀಡುವುದಿಲ್ಲ ದೂರುದಾರರಿಗೆ ಚೆಕ್ಕನ್ನು ಬ್ಯಾಂಕಿಗೆ ಕಳುಹಿಸುತ್ತೇವೆ ಹೋಗಿ ಎಂದು ಹೇಳಿದರೂ ಸಹ ವರಾಂಡದಲ್ಲಿ ಇರುತ್ತಾರೆ. ನನಗಿಂತ ಹಿಂದೆ ಈ ಕೆಲಸವನ್ನು 2ನೇ ಎದುರುದಾರರು ನಿರ್ವಹಿಸುತ್ತಿರುತ್ತಾರೆ. ದೂರುದಾರರಿಂದ ನಾನು ಯಾವುದೇ ಹಣವನ್ನು ಕೇಳಿರುವುದಿಲ್ಲ ಹಾಗೂ ಯಾವುದೇ ಮೊತ್ತಕ್ಕೂ ಬೇಡಿಕೆ ಇಟ್ಟಿರುವುದಿಲ್ಲ ಇತ್ಯಾದಿ ತಿಳಿಸಿರುತ್ತಾರೆ.

10. 2ನೇ ಎದುರುದಾರರು ತನ್ನ ವಿವರಣೆಯನ್ನು ದಿ: 9/8/2021 ರಂದು ನೀಡಿದ್ದು, ಅದರಲ್ಲಿ ವಿವರಣೆಯಲ್ಲಿ ಸಮಜಾಯಿಷಿ ಏನೆಂದರೆ ದೂರುದಾರರಾದ ಶ್ರೀ ರಾಮು ಪಿ.ಹೆಚ್. ಬಿನ್ ಹನುಮಂತರಾಯಪ್ಪ, ಯಶವಂತಪುರ, ಆರ್.ಆರ್.ನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು, ಇವರು ನಿಗಮದ ಸ್ವಯಂ ಊದ್ಯೋಗ ಯೋಜನೆಯಡಿ ಬಟ್ಟೆ ವ್ಯಾಪಾರ ಮಾಡುವ ಉದ್ದೇಶಕ್ಕಾಗಿ ರೂ.1.00 ಲಕ್ಷ ಆರ್ಥಿಕ ನೆರವನ್ನು ಕೋರಿ ನಿಗಮದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಚೇರಿಗೆ ದಿ: 25/5/2015 ರಂದು ಅರ್ಜಿಯನ್ನು ಸಲ್ಲಿಸಿದ್ದರು. ಅರ್ಜಿದಾರರನ್ನು ಆಯ್ಕೆ ಸಮಿತಿಯು ಸ್ವಯಂ ಉದ್ಯೋಗ ಯೋಜನೆಯಡಿ ಸೌಲಭ್ಯಯಕ್ಕಾಗಿ ಆಯ್ಕೆ ಮಾಡಿದ್ದು, ಅದರಂತೆ ಅರ್ಜಿದಾರರ ಅರ್ಜಿಯನ್ನು ಸಿಂಡಿಕೇಟ್ ಬ್ಯಾಂಕ್, ಯಶವಂತಪುರ ಶಾಖೆಗೆ ನಿಯಮಾನುಸಾರ ಸಾಲ ಮಂಜೂರಾತಿಗಾಗಿ ದಿ: 28/01/2016 ರಂದು ಜಿಲ್ಲಾ ಕಚೇರಿಯಿಂದ ಕಳುಹಿಸಲಾಗಿತ್ತು. ಸದರಿ ಅರ್ಜಿಯನ್ನು ಸಿಂಡಿಕೇಟ್ ಬ್ಯಾಂಕ್, ಯಶವಂತಪುರ ಶಾಖೆ, ಇವರು ಪರಿಗಕಣಿಸಿ ಅರ್ಜಿದಾರರಾದ ಶ್ರೀ ರಾಮು ಪಿ.ಹೆಚ್. ಬಿನ್ ಹನುವುಂತರಾಯಪ್ಪ, ಇವರಿಗೆ ಬಟ್ಟೆ ವ್ಯಾಪಾರ ಉದ್ದೇಶಕ್ಕಾಗಿ ರೂ 1.00 ಲಕ್ಷ ಆರ್ಥಿಕ ನೆರವನ್ನು ಮಂಜೂರು ಮಾಡಿದ್ದು, ಇವರಲ್ಲಿ ರೂ 65,000/- ಬ್ಯಾಂಕಿನಿಂದ ಮಂಜೂರು ಮಾಡಲಾದ ಸಾಲ ಮತ್ತು ರೂ 35,000/- ನಿಗಮದಿಂದ ಬಿಡುಗಡೆ ಮಾಡುವ ಸಹಾಯಧನವನ್ನು ಒಳಗೊಂಡಿರುತ್ತದೆ. ಸದರಿ ಕ್ಲೈಮ್ ಫಾರಂನ್ನು ಸಿಂಡಿಕೇಟ್ ಬ್ಯಾಂಕ್, ಯಶವಂತಪುರ ಶಾಖೆಯು ದಿ: 18/3/2016 ರಂದು ಫಲಾನುಭವಿಗೆ ಸಾಲ ಸೌಲಭ್ಯ ಮಂಜೂರು ಮಾಡಿ, ಸಹಾಯಧನ ಬಿಡುಗಡೆ ಮಾಡಲು ಕ್ಲೈಮ್ ನೀಡಿರುತ್ತಾರೆ. ಸದರಿ ಕ್ಲೈಮ್ ದಿ: 19/3/2016 ರಂದು ಜಿಲ್ಲಾ ಕಚೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ. ಜಿಲ್ಲಾ ಕಚೇರಿಯಲ್ಲಿ ಕಚೇರಿ ಸಿಬ್ಬಂದಿ ಕೊರತೆ ಇದ್ದಕಾರಣ ಮೇಲ್ಕಂಡಂತೆ ಸ್ವೀಕರಿಸಲಾಗಿದ್ದ, ದೂರುದಾರರ ಕ್ಲೈಮ್ ಅನ್ನು ಕಡತದಲ್ಲಿ ಮಂಡಿಸುವಂತೆ ಜಿಲ್ಲಾ ವ್ಯವಸ್ಥಾಪಕರು ದಿ: 21/3/2016 ರಂದು ನೀಡಿದ ಸೂಚನೆ ಅನುಸಾರವಾಗಿ ನಾನು ಸದರಿ ಕ್ಲೈಮ್ ಅನ್ನು ದಿ: 22/3/2016 ರಂದು ಶ್ರೀ ರಾಮು.ಪಿ.ಹೆಚ್. ಅವರಿಗೆ ಸಹಾಯಧನ ಬಿಡುಗಡೆ ಮಾಡುವ ಕುರಿತಂತೆ ಆದೇಶ ಕೋರಿ ಕಡತವನ್ನು ಜಿಲ್ಲಾ ವ್ಯವಸ್ಥಾಪಕರಿಗೆ ದಿ: 22/3/2016 ರಂದು ಮಂಡಿಸಿರುತ್ತೇನೆ. ಆ ನಂತರ ಜಿಲ್ಲಾ ವ್ಯವಸ್ಥಾಪಕರು, ಪ್ರಸ್ತಾವನೆಗೆ ದಿನಾಂಕ: 23/3/2016 ರಂದು ಕಡತದಲ್ಲಿ ಅನುಮೋದನೆ ನೀಡಿ ಕಡತವನ್ನು ಚೆಕ್ ಬರೆಯುವ ಸಲುವಾಗಿ ಲೆಕ್ಕ ಸಹಾಯಕರಾಗಿಯು ಕರ್ತವ್ಯ ನಿರ್ವಹಿಸುತ್ತಿದ್ದ 1ನೇ ಎದುರುದಾರರಿಗೆ ಕಡತವನ್ನು ಕಳುಹಿಸಿದ್ದರು. ತದ ನಂತರದ ಬೆಳವಣಿಗೆಗಳ ಬಗ್ಗೆ ನನಗೆ ಅರಿವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

11. 1 ಮತ್ತು 2ನೇ ಎದುರುದಾರರುಗಳ ವಿವರಣೆಗಳನ್ನು ಅವರುಗಳು ತನಿಖಾಧಿಕಾರಿಯ ಮುಂದೆ ನೀಡಿರುವ ಸಮಜಾಯಿಷಿಗೆ ತಾಳೆ ಮಾಡಿದಾಗ, ಪರಸ್ಪರ ಹೊಂದಾಣಿಕೆ ಇರುವುದಿಲ್ಲ ಮತ್ತು ಶಿಸ್ತಿನ ಕ್ರಮವನ್ನು ಕೈಬಿಡಲು ಯಾವುದೇ ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ. ಎದುರುದಾರರು ನೀಡಿರುವ ಮೇಲ್ಕಂಡ ಸಮಜಾಯಿಷಿಕೆಯನ್ನು ಪರಿಶೀಲಿಸಲಾಗಿ ಎದುರುದಾರರು ಯಾವುದೇ ಸೂಕ್ತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಈ ಹಂತದಲ್ಲಿ ಅವರ ಸಮಜಾಯಿಷಿಯನ್ನು ಪರಿಗಣಿಸಲು ಬರುವುದಿಲ್ಲ ಹಾಗೂ ವಿಚಾರಣೆ ಮಾಡದೆ ಇರಲು ಸೂಕ್ತ

ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಆದುದರಿಂದ, 1 ಮತ್ತು 2ನೇ ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/2/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು